# ೧೦

# ಪಿಕ್ಚರ್ಸ್ ಫಾರ್ ಲಾಂಗ್ವೇಜ್ ಲರ್ನಿಂಗ್- ಆಂಡ್ರ್ಯೂ ರೈಟ್

- ಸುರಂಜನಾ ಬರುವಾ




**Pictures for Language Learning**

**By Andrew Wright**

ಕೇಂಬ್ರಿಡ್ಜ್ ಹ್ಯಾಂಡ್‌ಬುಕ್ಸ್ ಫಾರ್ ಲ್ಯಾಂಗ್ವೇಜ್ ಟೀಚರ್ಸ್

ಪ್ರಧಾನ ಸಂಪಾದಕ: ಮೈಕೆಲ್ ಸ್ವಾನ್

ಪ್ರಕಟನೆ: ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್

ಮೊದಲ ಮುದ್ರಣ: ೧೯೮೯

ನಾಲ್ಕನೆಯ ಮುದ್ರಣ: ೧೯೯೩

ಪುಟಗಳು: ೨೧೮

ಐಎಸ್‌ಬಿಎನ್: ೦೫೨೧ ೩೫೮೦೦೦೦

ಸಾರಾಂಶ: ಚಿತ್ರಗಳನ್ನು ಬಳಸಿ ಭಾಷಾ ಕಲಿಕೆಯನ್ನು ಸುಗಮಗೊಳಿಸುವ ನವೀನ ಬೋಧನಾ ವಿಧಾನವನ್ನು ಉದಾಹರಣೆಗಳೊಂದಿಗೆ ಮುಂದಿಡುವ ಪುಸ್ತಕ ಪರಿಚಯ ಇದಾಗಿದೆ. ಚಿತ್ರವೆಂದರೆ ಪಠ್ಯಪುಸ್ತಕದಲ್ಲಿ ನೀಡಿರುವ ಚಿತ್ರಗಳೇ ಆಗಬೇಕೆಂದಿಲ್ಲ. ಶಿಕ್ಷಕರು ವಿವಿಧ ಮೂಲಗಳಿಂದ ಚಿತ್ರಗಳನ್ನು ಸಂಗ್ರಹಿಸಿಕೊಂಡು ತಮ್ಮ ಬೋಧನೆಯಲ್ಲಿ ಅಳವಡಿಸಿಕೊಳ್ಳಬಹುದು. ಇವೆಲ್ಲದಕ್ಕೂ ಒಂದು ಉತ್ತಮ ಕೈಪಿಡಿಯಾಗಿ ಈ ಪುಸ್ತಕ ಒದಗಿಬರುತ್ತದೆ. ಮಕ್ಕಳು ಆಸಕ್ತಿಯಿಂದ ಕಲಿಯುವಂತೆ ಅವರನ್ನು ತೊಡಗಿಸಿಲು ಭಾಷಾ ಶಿಕ್ಷಕರು ತಮ್ಮ ತರಗತಿಗಳಲ್ಲಿ ಇಲ್ಲಿರುವ ಸೂಚನೆಗಳನ್ನು ಬಳಸಬಹುದಾಗಿದೆ. ಶಾಲೆಗಳ ಗ್ರಂಥಾಲಯಗಳಿಗೆ ಇದು ಉಪಯುಕ್ತ ಸಂಪನ್ಮೂಲವಾಗಬಹುದು.

**ಪ್ರಮುಖ ಪದಗಳು: ಚಿತ್ರ ಮತ್ತು ದೃಶ್ಯ ಸಾಮಗ್ರಿಗಳು– pictures and visual material, ಭಾಷೆಯ ಕಲಿಕೆ– language learning, ಭಾಷಾ ಬೋಧನೆಯಲ್ಲಿ ಚಿತ್ರಗಳು ಮತ್ತು ದೃಶ್ಯರೂಪದ ಕಲಿಕಾ ಸಾಮಗ್ರಿ– pictures and visual materials in language teaching, ಸಮೃದ್ಧ ಸಚಿತ್ರ ಪುಸ್ತಕ– richly illustrated book, ಚಿತ್ರಗಳೊಂದಿಗೆ ಮಾಡಬಹುದಾದ ಭಾಷಾ ಕಾರ್ಯಕ್ಕೆ ಪ್ರಾಯೋಗಿಕ ಸಲಹೆ– practical suggestions for picture generated language work.**

ಈ ಸಂಪನ್ಮೂಲಭರಿತ ಮತ್ತು ನವೀನ ಪುಸ್ತಕವು ಭಾಷಾ ಬೋಧನೆಯಲ್ಲಿ ಚಿತ್ರಗಳು ಮತ್ತು ಇತರ ದೃಶ್ಯರೂಪದ ಕಲಿಕಾ ಸಾಮಗ್ರಿಗಳ ಪ್ರಾಮುಖ್ಯವನ್ನು ಕುರಿತು ಮಹತ್ತರವಾದ ಮೌಲಿಕ ಒಳನೋಟವನ್ನು ಒದಗಿಸುತ್ತದೆ. ವ್ಯಾಪಕವಾದ ಭಾಷಾ ಕಲಿಕೆಯ ಸಂದರ್ಭಗಳಲ್ಲಿ ಚಿತ್ರಗಳ ಪ್ರಮುಖ ಪಾತ್ರವನ್ನು ನಿರೂಪಿಸುವುದಲ್ಲದೆ, ನವೀನ ಮತ್ತು ಪರಿಣಾಮಕಾರಿ ಬೋಧನಾ ವಿಧಾನಗಳನ್ನು ಬಳಸಿಕೊಳ್ಳುವಲ್ಲಿನ ನಿರ್ಣಾಯಕ ಪಾತ್ರವನ್ನು ಹಾಗೂ ಅವುಗಳನ್ನು ಯಾವುದೇ ರೀತಿಯ ವಿದ್ಯಾರ್ಥಿಗಳ ಅಗತ್ಯಗಳಿಗೆ ತಕ್ಕಂತೆ ಅಳವಡಿಸಿಕೊಳ್ಳಬಹುದು ಎಂಬುದನ್ನು ಈ ಪುಸ್ತಕವು ಒತ್ತಿಹೇಳುತ್ತದೆ. ಭಾಷೆಯನ್ನು ಬೋಧಿಸುವಾಗ ಈ ಬಗೆಯಲ್ಲಿ ಚಿತ್ರ ಮತ್ತು ದೃಶ್ಯ ಸಾಮಗ್ರಿಗಳನ್ನು ನವೀನ ರೀತಿಯಲ್ಲಿ ಬಳಸುವುದಕ್ಕೆ ಕಡಮೆ ಪೂರ್ವಸಿದ್ಧತಾ ಸಮಯ ಮತ್ತು ಕಡಮೆ ಹಣದ ಅಥವಾ ಸೀಮಿತ ಸಂಪನ್ಮೂಲ ಸಾಮಗ್ರಿಗಳ ಅಗತ್ಯವಿರುತ್ತದೆ. ಈ ಸಮೃದ್ಧ ಸಚಿತ್ರ ಪುಸ್ತಕವು, ಉದಾಹರಣೆಗೆ ಒಂದೇ ಚಿತ್ರವನ್ನು ಬಳಸಿಕೊಂಡು ಐದು ವಿಭಿನ್ನ ಭಾಷಿಕ ಪರಿಕಲ್ಪನೆಗಳನ್ನು ಹೇಗೆ ಬೋಧನೆಯಲ್ಲಿ ಬಳಸಬಹುದು ಎಂದು ಒತ್ತಿಹೇಳಲು (ಉದಾಹರಣೆಗೆ: ವ್ಯಾಕರಣ ರಚನೆಗಳು, ಶಬ್ದಸಂಪತ್ತು, ವಿವಿಧ ಸಂದರ್ಭಗಳಾದ ಮನವಿ ಮಾಡುವುದು, ಇಷ್ಟ, ಇಷ್ಟವಿಲ್ಲದಿರುವುದನ್ನು ಅಭಿವ್ಯಕ್ತಿಸುವುದು, ಸಂದರ್ಭಗಳನ್ನು ವಿವರಿಸುವುದು, ಮತ್ತು ಆಲಿಸುವ, ಓದುವ, ಬರೆಯುವ ಮತ್ತು ಮಾತನಾಡುವ ಕೌಶಲಗಳನ್ನು ಬಲಪಡಿಸುವುದು) ವಾಸ್ತವಿಕ ಉದಾಹರಣೆಗಳನ್ನು (ಅಧ್ಯಾಯ ೧) ನೀಡುತ್ತದೆ.

ಈ ಪುಸ್ತಕವನ್ನು ಒಟ್ಟು ೧೬ ಅಧ್ಯಾಯಗಳಾಗಿ ನಾಲ್ಕು ವಿಭಾಗಗಳಲ್ಲಿ ವಿಂಗಡಿಸಲಾಗಿದೆ: ಇವುಗಳಲ್ಲಿ, 'ಎ' ವಿಭಾಗವು ವಿದ್ಯಾರ್ಥಿಗಳ ಸಂವಹನ ಕೌಶಲಗಳನ್ನು ಉತ್ತಮಪಡಿಸಲು ನೆರವಾಗುವ ದೃಶ್ಯಗಳ ಪಾತ್ರವನ್ನು ಚರ್ಚಿಸುತ್ತದೆ. 'ಬಿ' ವಿಭಾಗ ಮಾತನಾಡುವ ಮತ್ತು ಬರೆಯುವ ಕೌಶಲಗಳ ಮಹತ್ತ್ವವನ್ನು ಮುಂದಿಡುತ್ತವೆ ಮತ್ತು 'ಸಿ' ವಿಭಾಗವು ಆಲಿಸುವ ಮತ್ತು ಓದುವ ಕೌಶಲಗಳನ್ನು ಒತ್ತಿ ಹೇಳುತ್ತದೆ;

ಒಟ್ಟಾರೆ, ಚಿತ್ರಗಳೊಂದಿಗೆ ಮಾಡಬಹುದಾದ ಭಾಷಾ ಕಾರ್ಯಕ್ಕೆ ೨೦೦ ಕ್ಕಿಂತ ಹೆಚ್ಚು ಪ್ರಾಯೋಗಿಕ ಸಲಹೆಗಳನ್ನು ನೀಡಲಾಗಿದೆ. 'ಬಿ' ವಿಭಾಗವು 'ಯಾಂತ್ರಿಕ ಅಭ್ಯಾಸ', ಸಂವಹನ, ಕಿರು ಸಂಭಾಷಣೆ ಮತ್ತು ಪಾತ್ರಾಭಿನಯಗಳನ್ನು ನಿರ್ವಹಿಸಲು ನೆರವಾಗುವ ವಿವಿಧ ಉಪ–ವಿಭಾಗಗಳನ್ನು ಹೊಂದಿದೆ. 'ಸಿ' ವಿಭಾಗವು ಆಲಿಸುವ ಮತ್ತು ಓದುವ ಕೌಶಲಗಳನ್ನು ಅಭಿವೃದ್ಧಿಪಡಿಸಲು ಬಳಸಬಹುದಾದ ಚಿತ್ರಗಳ ಅರ್ಥ – ಗ್ರಹಿಕೆಯ ಅಂಶಗಳ ಮೇಲೆ ಗಮನ ಹರಿಸುತ್ತದೆ. ರೈಟ್ ಅವರು ನೀಡುವ ಉದಾಹರಣೆಗಳು ಪ್ರಾಯೋಗಿಕವಾಗಿದ್ದು, ಅವು ಸುಲಭವಾಗಿ ಲಭ್ಯವಿರುವ ದೃಶ್ಯ ಸಾಮಗ್ರಿಗಳನ್ನು ಬಳಸುತ್ತವೆ ಮತ್ತು ಎಲ್ಲಿ ಚಿತ್ರಗಳನ್ನು ಬಳಸಲಾಗಿದೆಯೋ, ಅವು ಶಿಕ್ಷಕರು ಸುಲಭವಾಗಿ ಬಳಸುವ ರೀತಿಯಲ್ಲಿವೆ.

ಪುಸ್ತಕದ ಕೊನೆಯ 'ಡಿ' ಭಾಗವು 'ಚಿತ್ರ ಗ್ರಂಥಾಲಯವನ್ನು' ನಿರ್ಮಿಸಲು ಸುಲಭವಾದ ಮಾರ್ಗಗಳನ್ನು ಒದಗಿಸುತ್ತದೆ. ಚಿತ್ರಗಳನ್ನು ಹುಡುಕುವ ಬಗೆ ಹೇಗೆ, ಚಿತ್ರಗಳನ್ನು ವರ್ಗೀಕರಿಸುವುದು ಮತ್ತು ಭವಿಷ್ಯದ ಬೋಧನಾ ಪರಿಕರಗಳಾಗಿ ಬಳಸಲು ಅವುಗಳನ್ನು ಹೇಗೆ ಸಂಗ್ರಹಿಸಬಹುದು ಎಂಬುದನ್ನು ಕುರಿತು ಉಪಯುಕ್ತ ಸಲಹೆಗಳನ್ನು ಒದಗಿಸುತ್ತದೆ. ವಿಶೇಷವಾಗಿ ಭಾಷಾ ಶಿಕ್ಷಕರಾದ 'ರೈಟ್' ಅವರು ವಿವರಿಸುವ ಚಟುವಟಿಕೆಗಳನ್ನು ವಿಭಿನ್ನ ಹಂತದ ಭಾಷಾ ಬೋಧನಾ ಪ್ರಕ್ರಿಯೆಯ ಭಾಗವಾಗಿ ಸಂಯೋಜಿಸಬಹುದಾದ್ದರಿಂದ ಈ ಪುಸ್ತಕವನ್ನು ಉಪಯುಕ್ತ ಸಾಮಗ್ರಿಯಾಗಿ ಕಂಡುಕೊಳ್ಳುತ್ತಾರೆ. ಅಲ್ಲದೆ, ವಿಭಿನ್ನ ಬೋಧನಾ ಪರಿಸರಗಳಿಗೆ ಸರಿಹೊಂದುವಂತೆ ಈ ಆಲೋಚನೆಗಳನ್ನು ಹೇಗೆ ಸೃಷ್ಟ್ಯಾತ್ಮಕವಾಗಿ ಬಳಸಿಕೊಳ್ಳಬಹುದು ಎಂಬ ಬಗ್ಗೆ ಹಲವು ಸೂಚನೆಗಳನ್ನು ನೀಡಲಾಗಿದೆ. ೧೪ನೇ ಅಧ್ಯಾಯ ಹಲವಾರು ಚಿತ್ರಗಳು ಮತ್ತು ಅವುಗಳ ಉಪಯೋಗಗಳನ್ನು ಪಟ್ಟಿಮಾಡುತ್ತದೆ. (ಒಂದೇ ವಸ್ತುವಿನ ಚಿತ್ರಗಳು, ಪ್ರಸಿದ್ಧ ವ್ಯಕ್ತಿಗಳ ಚಿತ್ರಗಳು, ಕೆಲಸ ಮಾಡುತ್ತಿರುವ ಜನರ ಚಿತ್ರಗಳು, ಇತಿಹಾಸದಿಂದ ಆಯ್ದ ಕಾಲ್ಪನಿಕ ಮತ್ತು ಸುದ್ದಿ ಚಿತ್ರಗಳು, ನಕ್ಷೆಗಳು, ಚಿಹ್ನೆಗಳು, ಜೋಡಿ ಚಿತ್ರಗಳು, ಪತ್ರಗಳು, ಅನುಕ್ರಮಣಿಕೆಗಳು, ಇತ್ಯಾದಿ). ೧೫ನೇ ಅಧ್ಯಾಯ ಚಿತ್ರಗಳ ರಚನೆ ಮತ್ತು ಅಳವಡಿಕೆಗಳನ್ನು ಕುರಿತು ಹೇಳುತ್ತದೆ. ಈ ಎರಡೂ ಅಧ್ಯಾಯಗಳು ಭಾಷಾ ಬೋಧನೆಯ ತರಗತಿಗಳಲ್ಲಿ ಪ್ರಾಯೋಗಿಕ ಅನ್ವಯಿಕೆಗೆ ಹಾಗೂ ಚಿತ್ರಗಳ ಸಂರಕ್ಷಣೆ ಮತ್ತು ನವೀನ ರೀತಿಯ ಬಳಕೆಗೆ ಉಪಯುಕ್ತ ಮಾಹಿತಿಯನ್ನು ನೀಡುತ್ತವೆ.

* * *

**ಚಿಂತನಾತ್ಮಕ ಪ್ರಶ್ನೆಗಳು:**

೧. ಚಿತ್ರಗಳಿಂದ ಭಾಷಾ ಬೋಧನೆ ಎಷ್ಟು ಪರಿಣಾಮಕಾರಿ?

೨. ಚಿತ್ರಗಳನ್ನು ಸಂಪನ್ಮೂಲವಾಗಿ ಬಳಸಲು ತಂತ್ರಜ್ಞಾನ ಅಗತ್ಯವೇ?

೩. ಚಿತ್ರಗಳ ಸೃಷ್ಟಿಯಲ್ಲಿ ಶಿಕ್ಷಕರ ಪಾತ್ರವೇನು?

**ಸುರಂಜನಾ ಬರುವಾ:** ದೆಹಲಿಯ ವಿಶ್ವವಿದ್ಯಾಲಯದಿಂದ ಭಾಷಾಶಾಸ್ತ್ರದಲ್ಲಿ ಪಿಎಚ್.ಡಿ., ಹೊಂದಿದ್ದಾರೆ, ಪ್ರಸ್ತುತ ಅಸ್ಸಾಂ ಸ್ಟಡೀಸ್, ತೇಜ್ಪುರ್ ವಿಶ್ವವಿದ್ಯಾಲಯ, ಅಸ್ಸಾಂನ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಸಂಭಾಷಣೆ/ಸಂವಾದ ವಿಶ್ಲೇಷಣೆ, ಭಾಷಾ ಬೋಧನೆ, ಲಿಂಗತ್ವದ ಅಧ್ಯಯನಗಳು ಮತ್ತು ಭಾಷಾಂತರ ಅಧ್ಯಯನಗಳು ಅವರ ಆಸಕ್ತಿಯ ಕ್ಷೇತ್ರಗಳಾಗಿವೆ. suranjana.barua@gmail.com

**ಅನುವಾದ:** ಕಾರ್ತಿಕ್ ಕೆ / **ಪರಿಶೀಲನೆ:** ರಾಜಗೋಪಾಲ್

**ಮೂಲ:** *Language and Language Teaching,* Volume 1 Number 2 July 2012.

❑